ಚರ್ಯೆಯನ್ನು ದಾಟಿ ಮುಂದೆ ಹೋಗಬಾರದು. ಇಲ್ಲಿ ಆಚರಿಸುವುದೆಂದರೆ ಸಂತೋಷ ಮತ್ತು ಆಹ್ಲಾದವನ್ನು ಪ್ರಕಟಿಸುವುದು ಹಾಗೂ ಆದರವನ್ನು ವ್ಯಕ್ತಪಡಿಸುವುದು. ಇವೆಲ್ಲವೂ ಅಲ್ಲಾಹನೆಡೆಗೆ ಸಮೀಪಗೊಳಿಸುವ ಇಬಾದತ್‌ಗಳು. ಅಲ್ಲಾಹು ಮತ್ತು ಪ್ರವಾದಿ(ﷺ)ರವರು ಶರೀಅತ್ ಆಗಿ ಮಾಡಿರದ ಇಬಾದತ್‌ಗಳನ್ನು ಶರೀಅತ್ ಆಗಿ ಮಾಡುವುದು ನಮಗೆ ಸಮ್ಮತಾರ್ಹವಲ್ಲ. ಆದ್ದರಿಂದ ಅವರ ಜನ್ಮದಿನ ಆಚರಿಸುವುದು ಬಿದ್‌ಅತ್ ಆಗಿದೆ. ಪ್ರವಾದಿ(ﷺ)ರವರು ಹೇಳಿದರು: "ಎಲ್ಲ ಬಿದ್‌ಅತ್‌ಗಳೂ ದುರ್ಮಾರ್ಗವಾಗಿವೆ."

ಪ್ರವಾದಿ(ﷺ)ರವರು ಇದನ್ನು ಅನಿರ್ಬಂಧಿತವಾಗಿ ಹೇಳಿದ್ದಾರೆ. ಅವರಾದರೋ ಮನುಷ್ಯರಲ್ಲೇ ಅತಿಹೆಚ್ಚು ಅರಿವುಳ್ಳವರು. ಮನುಷ್ಯರಲ್ಲೇ ಅತಿಹೆಚ್ಚು ಸ್ಪಷ್ಟವಾಗಿ ಮತ್ತು ನಿರರ್ಗಳವಾಗಿ ಮಾತನಾಡುವವರು. ಮನುಷ್ಯರಲ್ಲೇ ಅತಿಹೆಚ್ಚು ಹಿತಾಕಾಂಕ್ಷೆಯಿಂದ ಕೂಡಿದ ಉಪದೇಶ ನೀಡುವವರು. ಇದರಲ್ಲಿ ಯಾವುದೇ ಸಂದೇಹವೂ ಇಲ್ಲ. ಬಿದ್‌ಅತ್‌ಗಳ ಪೈಕಿ ಯಾವುದನ್ನೂ ಕೂಡ ಅದು ದುರ್ಮಾರ್ಗ ಅಲ್ಲವೆಂದು ಪ್ರವಾದಿ(ﷺ)ರವರು ಹೇಳಿಲ್ಲ. ದುರ್ಮಾರ್ಗವು ಸನ್ಮಾರ್ಗಕ್ಕೆ ವಿರುದ್ಧವಾಗಿದೆಯೆಂದು ನಾವು ಅರಿತಿದ್ದೇವೆ. ಆದ್ದರಿಂದಲೇ ಈ ಹದೀಸಿನ ಕೊನೆಯಲ್ಲಿ ಅನ್ನಸಾಈ ವರದಿ ಮಾಡಿದ್ದಾರೆ: "ಎಲ್ಲ ದುರ್ಮಾರ್ಗಗಳೂ ನರಕದಲ್ಲಾಗಿವೆ."

ಪ್ರವಾದಿ(ﷺ)ರವರ ಜನ್ಮದಿನ ಆಚರಿಸುವುದನ್ನು ಅಲ್ಲಾಹು ಮತ್ತು ರಸೂಲ್(ﷺ)ರವರು ಇಷ್ಟಪಟ್ಟಿದ್ದರೆ ಖಂಡಿತವಾಗಿಯೂ ಅವರದನ್ನು ಶರೀಅತ್ ಆಗಿ ಮಾಡುತ್ತಿದ್ದರು. ಒಂದು ವೇಳೆ ಅದು ಶರೀಅತ್ ಆಗಿದ್ದರೆ ಅದು ಸಂರಕ್ಷಿಸಲ್ಪಡುತ್ತಿತ್ತು. ಯಾಕೆಂದರೆ ಶರೀಅತ್ತನ್ನು ಸುರಕ್ಷಿತವಾಗಿ ಸಂರಕ್ಷಿಸುವ ಹೊಣೆಯನ್ನು ಅಲ್ಲಾಹು ವಹಿಸಿಕೊಂಡಿದ್ದಾನೆ. ಒಂದು ವೇಳೆ ಅದು ಸುರಕ್ಷಿತವಾಗಿ ಸಂರಕ್ಷಿಸಲ್ಪಡುತ್ತಿದ್ದರೆ ಖುಲಫಾಉ ರ್‍ರಾಶಿದೀನ್, ಸಹಾಬಾಗಳು, ತಾಬಿಊನ್‌ಗಳು ಮತ್ತು ಅವರನ್ನು ಉತ್ತಮ ರೀತಿಯಲ್ಲಿ ಅನುಸರಿಸಿದವರು ಅದನ್ನು ಆಚರಿಸುತ್ತಿದ್ದರು. ಅವರು ಹಾಗೆ ಮಾಡದಿರುವ ಕಾರಣ ಅದು ಅಲ್ಲಾಹನ ಧರ್ಮದಲ್ಲಿ ಸೇರಿದ್ದಲ್ಲವೆಂದು ನಿಶ್ಚಿತಗೊಳ್ಳುತ್ತದೆ.

ಮುಸ್ಲಿಮ್ ಸಹೋದರರಿಗೆ ನಾನು ನೀಡುವ ಸಾರ್ವತ್ರಿಕ ಉಪದೇಶವೇನೆಂದರೆ, ಅಲ್ಲಾಹನ ಗ್ರಂಥದಲ್ಲಿ ಅಥವಾ ಪ್ರವಾದಿ(ﷺ)ರವರ ಸುನ್ನತ್‌ನಲ್ಲಿ ಶರೀಅತ್ ಆಗಿ ದೃಢಪಟ್ಟಿರದ, ಸಹಾಬಾ ಕಿರಾಮ್ ಆಚರಿಸದ ಇಂತಹ ಆಚರಣೆಗಳನ್ನು ವರ್ಜಿಸಿರಿ, ಶರೀಅತ್ತಿನಲ್ಲಿ ಸ್ಪಷ್ಟವಾಗಿ ದೃಢಪಟ್ಟಿರುವ ಕಡ್ಡಾಯ ಹಾಗೂ ಐಚ್ಛಿಕ ಕರ್ಮಗಳನ್ನು ಮಾಡುವುದರಲ್ಲಿ ಅತೀವ ಗಮನ ನೀಡಿರಿ. ಯಾಕೆಂದರೆ ಅದರಲ್ಲಿ ವೈಯುಕ್ತಿಕ ಮತ್ತು ಸಾಮಾಜಿಕ ಹಿತವಿದೆ.

ಇಂತಹ ಬಿದ್‌ಅತ್‌ಗಳನ್ನು ಆಚರಿಸುವುದರಲ್ಲಿ ಅತ್ಯಂತ ಕಾಳಜಿ ವಹಿಸುವ ಜನರ ಸ್ಥಿತಿಗಳನ್ನು ಅವಲೋಕಿಸಿದರೆ ಅವರು ಸುನ್ನತ್‌ಗಳ ಪೈಕಿ, ಮಾತ್ರವಲ್ಲ, ಕಡ್ಡಾಯ ಕರ್ಮಗಳ ಪೈಕಿ ಕೂಡ ಅನೇಕ ಕರ್ಮಗಳನ್ನು ವರ್ಜಿಸುವವರಾಗಿದ್ದಾರೆ. ಇಷ್ಟೇ ಅಲ್ಲ, ಇಂತಹ ಆಚರಣೆಗಳ ಸಂದರ್ಭ ಅವರು ಪ್ರವಾದಿ(ﷺ)ರವರ ವಿಷಯದಲ್ಲಿ ಹದ್ದು ಮೀರುವ ಮೂಲಕ ಯಾವ ಶಿರ್ಕ್‌ನ ಬಗ್ಗೆ ಪ್ರವಾದಿ(ﷺ)ರವರು ಜನರಿಗೆ ಎಚ್ಚರಿಕೆ ನೀಡಿದ್ದರೋ ಅದೇ ಶಿರ್ಕ್‌ನತ್ತ ಕೊಂಡೊಯ್ಯುವ ಮತ್ತು ಇಸ್ಲಾಮಿನಿಂದ ಹೊರತಳ್ಳುವ ಹಾಗೂ ಅವರ ರಕ್ತ, ಮತ್ತು ಸಂಪತ್ತು ಧರ್ಮಸಮ್ಮತವಾಗುವ ಪ್ರವೃತ್ತಿಗಳನ್ನು ಮಾಡುತ್ತಿದ್ದಾರೆ. ಇಸ್ಲಾಮಿನಿಂದ ಖಂಡಿತವಾಗಿಯೂ ಹೊರತಳ್ಳುವಂತಹ ಅನೇಕ ಕವಿತೆಗಳನ್ನು ಇಂತಹ ಸಂದರ್ಭಗಳಲ್ಲಿ ಹಾಡಲಾಗುತ್ತದೆ ಎಂಬುದನ್ನೂ ನಾವು ಅರಿತಿದ್ದೇವೆ. ಅವುಗಳ ಪೈಕಿ ಒಂದು ಅಲ್‌ಬೂಸೂರಿಯ ಬುರ್ದ ಬೈತ್. ಅದರಲ್ಲಿರುವ ಕೆಲವು ಗೆರೆಗಳು ಹೀಗಿವೆ:

يَا أَكْرَمَ الْخَلْقِ مَا لِي مَنْ أَلُوذُ بِهِ سِوَاكَ عِنْدَ حُلُولِ الْحَادِثِ الْعَمِمِ

"ಓ ಸೃಷ್ಟಿಗಳಲ್ಲೇ ಗೌರವಾನ್ವಿತರೇ! ಸಾರ್ವತ್ರಿಕ ವಿಪತ್ತುಗಳು ಘಟಿಸುವ ಸಂದರ್ಭದಲ್ಲಿ ನನಗೆ ತಮ್ಮ ಹೊರತು ಶರಣು ಹೋಗಲು ಯಾರಿದ್ದಾರೆ?"

إِنْ لَمْ تَكُنْ آخِذًا يَوْمَ الْمَعَادِ يَدِي صَفْحًا وَإِلَّا فَقُلْ يَا زَلَّةَ الْقَدَمِ

"ಮರಳುವಿಕೆಯ (ಅಂತ್ಯ)ದಿನದಂದು ತಾವು ನನ್ನ ಕೈ ಹಿಡಿಯದಿದ್ದರೆ ಪಾದಗಳು ಜಾರುವ ಸಂದರ್ಭ ನನ್ನ ಸ್ಥಿತಿಯೇನಾದೀತು?"

فَإِنَّ مِنْ جُودِكَ الدُّنْيَا وَضَرَّتَهَا وَمِنْ عُلُومِكَ عِلْمُ اللَّوْحِ وَالْقَلَمِ

"ಇಹಲೋಕ ಮತ್ತು ಪರಲೋಕವು ತಮ್ಮ ಔದಾರ್ಯದಲ್ಲಿ ಸೇರಿದ್ದಾಗಿವೆ ಮತ್ತು ಅಲ್ಲೌಹ್ ಹಾಗೂ ಅಲ್‌ಕಲಮ್‌ನ ಜ್ಞಾನವು ತಮ್ಮ ಜ್ಞಾನದಲ್ಲಿ ಸೇರಿದ್ದಾಗಿದೆ."

ಇಂತಹ ವಿಶೇಷಣಗಳು ಅಲ್ಲಾಹನ ಹೊರತು ಯಾರಿಗೂ ಹೊಂದಿಕೆಯಾಗುವುದಿಲ್ಲ. ಇಂತಹ ವಾಕ್ಯಗಳ ಅರ್ಥವನ್ನು ಯಾರಾದರೂ ಗ್ರಹಿಸಿಕೊಂಡರೆ ಅವನು ಇದನ್ನು ಪ್ರವಾದಿ(ﷺ)ರವರ ಬಗ್ಗೆ ಹೇಗೆ ಹೇಳುವನೆಂದೇ ನನಗೆ ಅಚ್ಚರಿಯಾಗುತ್ತಿದೆ. ಇಹಲೋಕ ಮತ್ತು ಪರಲೋಕವು ಪ್ರವಾದಿ(ﷺ)ರವರ ಔದಾರ್ಯದಲ್ಲಿ ಸೇರಿದ್ದಾಗಿದ್ದರೆ ಎಲ್ಲವೂ ಅವರ ಔದಾರ್ಯವೇ ಆಗಿದೆ. ಹಾಗಾದರೆ ಅಲ್ಲಾಹನಿಗೆ ಉಳಿದಿರುವುದಾದರೂ ಏನು? ಅಲ್ಲಾಹನಿಗೆ ಉಳಿದಿರುವುದಾದರೂ ಏನು? ಇಲ್ಲ ಏನೊಂದೂ ಉಳಿದಿಲ್ಲ! ಇಹಲೋಕ ಮತ್ತು ಪರಲೋಕದಲ್ಲಿ ಸ್ವಲ್ಪವೂ ಅಲ್ಲಾಹನಿಗೆ ಉಳಿದಿಲ್ಲ!

ಹಾಗೆಯೇ, ಅಲ್ಲೌಹ್ ಮತ್ತು ಅಲ್‌ಕಲಮ್‌ನ ಜ್ಞಾನವು ಪ್ರವಾದಿ(ﷺ)ರವರ ಜ್ಞಾನದಲ್ಲಿ ಸೇರಿದ್ದಾಗಿದೆ ಎಂಬ ವಾಕ್ಯ. ಪ್ರವಾದಿ(ﷺ)ರವರ ಬಗ್ಗೆ ಹೀಗೆ ಹೇಳುವವನು ಅಲ್ಲಾಹನಿಗೆ ಬಾಕಿಯುಳಿಸುವ ಜ್ಞಾನವಾದರೂ ಏನು ಎಂದೇ ನನಗೆ ಅರ್ಥವಾಗುತ್ತಿಲ್ಲ!

ಓ ಮುಸ್ಲಿಮ್ ಸಹೋದರನೇ! ನೀನು ಅಲ್ಲಾಹನನ್ನು ಭಯಪಡುವವನಾಗಿದ್ದರೆ ಪ್ರವಾದಿ(ﷺ)ರವರನ್ನು ಅಲ್ಲಾಹು ಯಾವ ಪದವಿಯಲ್ಲಿ ಇಟ್ಟಿರುವನೋ ಅದೇ ಪದವಿಯಲ್ಲಿ ಅವರನ್ನು ಇಡು. ಅವರು ಅಲ್ಲಾಹನ ದಾಸ ಮತ್ತು ಸಂದೇಶವಾಹಕರಾಗಿದ್ದಾರೆ. ಆದ್ದರಿಂದ ಅವರ ಬಗ್ಗೆ ಅಲ್ಲಾಹನ ದಾಸ ಮತ್ತು ಸಂದೇಶವಾಹಕರು ಎಂದು ಹೇಳು. ಅಲ್ಲಾಹು ಅವರ ಬಗ್ಗೆ ಅವರ ಮೂಲಕವೇ ಏನೆಲ್ಲ ಹೇಳಿದ್ದಾನೋ ಅದರಲ್ಲಿ ವಿಶ್ವಾಸವಿಡು.

"(ಓ ಪ್ರವಾದಿಯವರೇ!) ಹೇಳಿರಿ: ನನ್ನ ಬಳಿ ಅಲ್ಲಾಹನ ಖಜಾನೆಗಳಿವೆಯೆಂದು ನಾನು ನಿಮ್ಮೊಂದಿಗೆ ಹೇಳುವುದಿಲ್ಲ. ನಾನು ಅಗೋಚರ ಜ್ಞಾನವನ್ನು ಅರಿತಿಲ್ಲ. ನಾನು ಮಲಕ್ ಆಗಿದ್ದೇನೆಂದು ನಾನು ನಿಮ್ಮೊಂದಿಗೆ ಹೇಳುವುದಿಲ್ಲ. ನನಗೆ ದಿವ್ಯಸಂದೇಶವಾಗಿ ಏನೆಲ್ಲ ನೀಡಲಾಗುತ್ತದೋ ಅದನ್ನು ಮಾತ್ರ ನಾನು ಅನುಸರಿಸುತ್ತಿದ್ದೇನೆ." [ಕುರ್‌ಆನ್ 6/50]

"(ಓ ಪ್ರವಾದಿಯವರೇ!) ಹೇಳಿರಿ: ನಿಮಗಾಗಿ ಯಾವುದೇ ಹಾನಿ ಅಥವಾ ಮಾರ್ಗದರ್ಶನವನ್ನು ನಾನು ಸ್ವಾಧೀನದಲ್ಲಿಟ್ಟುಕೊಂಡಿಲ್ಲ." [ಕುರ್‌ಆನ್ 72/21]

"(ಓ ಪ್ರವಾದಿಯವರೇ!) ಹೇಳಿರಿ: ಅಲ್ಲಾಹನಿಗೆದುರಾಗಿ ನನಗೆ ರಕ್ಷಣೆ ಒದಗಿಸುವನಾರೂ ಇಲ್ಲ. ಅವನ ಹೊರತು ಬೇರೊಂದು ಅಭಯಸ್ಥಾನವನ್ನು ನಾನು ಕಾಣುವುದೂ ಇಲ್ಲ." [ಕುರ್‌ಆನ್ 72/22] ಅಂದರೆ ಪ್ರವಾದಿ(ﷺ)ರಿಗೆ ಏನಾದರೂ ಹಾನಿ ಮಾಡಬೇಕೆಂದು ಅಲ್ಲಾಹು ಬಯಸಿದರೆ ಅದನ್ನು ತಡೆದು ಅವರಿಗೆ ರಕ್ಷಣೆ ನೀಡಲು ಯಾರಿಗೂ ಸಾಧ್ಯವಿಲ್ಲ ಎಂದಾಗಿದೆ.

ಆದ್ದರಿಂದ ಪ್ರವಾದಿ(ﷺ)ರವರ ಜನ್ಮದಿನವನ್ನು ಕೊಂಡಾಡುವ ಇಂತಹ ಆಚರಣೆಗಳು ಕೇವಲ ಬಿದ್‌ಅತ್ ಎಂಬ ಪದದಲ್ಲಿ ಸಂಕ್ಷಿಪ್ತಗೊಳ್ಳುವುದಿಲ್ಲ. ಅದರಲ್ಲಿ ನಿಷಿದ್ಧವಾಗಿರುವ ಮತ್ತು ಶಿರ್ಕ್‌ನತ್ತ ಕೊಂಡೊಯ್ಯುವ ಸಂಗತಿಗಳೂ ಇವೆ ಎಂದು ಇದರಿಂದ ಸ್ಪಷ್ಟವಾಗುತ್ತದೆ.

ಅದೇ ರೀತಿ, ನಾವು ಆಲಿಸಿರುವ ಪ್ರಕಾರ ಇಂತಹ ಆಚರಣೆಗಳಲ್ಲಿ ಪುರುಷರು ಮತ್ತು ಸ್ತ್ರೀಯರು ಪರಸ್ಪರ ಬೆರೆಯುವ ಮತ್ತು ಚಪ್ಪಾಳೆ, ದಫ್ಫ್ ಮುಂತಾದ ವಿಶ್ವಾಸಿಯಾಗಿರುವ ಯಾರೂ ಸಂದೇಹಪಡದಂತಿರುವ ನಿಷಿದ್ಧ ಕರ್ಮಗಳೂ ಸೇರಿಕೊಂಡಿವೆ. ಅಲ್ಲಾಹು ಮತ್ತು ಪ್ರವಾದಿ(ﷺ)ರವರು ನಮಗೆ ಶರೀಅತ್ ಆಗಿ ಮಾಡಿರುವ ಕಾರ್ಯಗಳಲ್ಲಿ ನಾವು ಸಂತೃಪ್ತರಾಗೋಣ. ಮನಃಶಾಂತಿ ಮತ್ತು ಸಾಮಾಜಿಕ ಶಾಂತಿಯಿರುವುದು ಅದರಲ್ಲೇ ಆಗಿದೆ.

For more information on Islam, please visit:

islamhouse.com

باللغة الكنادية

# حكم الاحتفال بمولد النبي صلى الله عليه وسلم

# ಮೀಲಾದುನ್ನಬಿ

## ಆಚರಿಸುವುದರ ವಿಧಿ

RULE ON CELEBRATING MEELADUNNABI

ಅಲ್ಲಾಮಾ ಅಲ್‌ಫಾಕಿಹಾನೀ

ಮತ್ತು

ಅಲ್ಲಾಮಾ ಅಲ್‌ಉಸೈಮೀನ್

[ರಹಿಮಹುಮಲ್ಲಾಹು ತಆಲಾ]

Publishers

IslamHouse.com

# ತಾಜುದ್ದೀನ್ ಅಲ್‌ಫಾಕಿಹಾನೀ(رحمه الله)

ಹಿಜ್ರಾ 734ರಲ್ಲಿ ಅಲೆಕ್ಸಾಂಡ್ರಿಯಾದಲ್ಲಿ ಮರಣಹೊಂದಿದ ತಾಜುದ್ದೀನ್ ಅಲ್‌ಫಾಕಿಹಾನೀ ಎಂದೇ ಖ್ಯಾತಿಗಳಿಸಿದ, ಪ್ರಸಿದ್ಧ ಶಾಫಿಈ ವಿದ್ವಾಂಸರಾದ ಉಮರ್ ಇಬ್ನ್ ಅಲೀ ಇಬ್ನ್ ಸಾಲಿಮ್ ಇಬ್ನ್ ಸದಕಾ ಅಲ್ಲಖ್ಮೀ(رحمه الله) ತಮ್ಮ 'ಅಲ್‌ಮೌರಿದ್ ಫೀ ಅಮಲಿಲ್ ಮೌಲಿದ್' ಎಂಬ ಫತ್ವಾದಲ್ಲಿ ಹೇಳುತ್ತಾರೆ:

ಸಂದೇಶವಾಹಕರ ನಾಯಕರನ್ನು ಅನುಸರಿಸುವುದರೆಡೆಗೆ ನಮಗೆ ಮಾರ್ಗದರ್ಶನ ಮಾಡಿದ, ಧರ್ಮವನ್ನು ಎತ್ತಿಹಿಡಿಯುವ ಸಲುವಾಗಿ ಹಿದಾಯತ್ ನೀಡಿ ನಮ್ಮನ್ನು ಸಬಲಗೊಳಿಸಿದ, ಶರಈ ಜ್ಞಾನದ ಬೆಳಕುಗಳಿಂದ ಮತ್ತು ಸ್ಪಷ್ಟವಾದ ಸತ್ಯದ ಪ್ರಖರತೆಗಳಿಂದ ನಮ್ಮ ಹೃದಯಗಳು ತುಂಬಿಕೊಳ್ಳುವವರೆಗೆ ಅಸ್ಸಲಫು ಸ್ಸಾಲಿಹ್‌ಗಳ ಚರ್ಯೆಗಳನ್ನು ಅನುಸರಿಸಲು ನಮಗೆ ಸುಲಭೀಕರಿಸಿದ ಮತ್ತು ನೂತನ ಅನಾಚಾರಗಳಿಂದ ಮತ್ತು ಧರ್ಮದಲ್ಲಿ ನಿರ್ಮಿಸಲಾದ ನವೀನಾಚಾರಗಳಿಂದೆಲ್ಲ ನಮ್ಮ ಆಂತರ್ಯಗಳನ್ನು ಶುದ್ಧೀಕರಿಸಿದ ಅಲ್ಲಾಹುವಿಗೆ ಸರ್ವಸ್ತುತಿ.

ದೃಢಜ್ಞಾನದ ಬೆಳಕುಗಳಿಂದ ಅನುಗ್ರಹಿಸಿದ ಕಾರಣ ನಾನು ಅವನನ್ನು ಸ್ತುತಿಸುತ್ತೇನೆ. ಬಿಗಿಯಾಗಿ ಹಿಡಿದುಕೊಳ್ಳುವ ಸಲುವಾಗಿ ಬಲವಾದ ಹಗ್ಗವನ್ನು ಒದಗಿಸಿದ ಕಾರಣ ನಾನು ಅವನಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಅಲ್ಲಾಹನ ಹೊರತು ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ ಮತ್ತು ಅವನು ಏಕೈಕನೂ ಸಹಭಾಗಿಯಿಲ್ಲದವನೂ ಆಗಿದ್ದಾನೆ ಹಾಗೂ ಮುಹಮ್ಮದ್(ﷺ)ರವರು ಅವನ ದಾಸರೂ, ಸಂದೇಶವಾಹಕರೂ ಆಗಿದ್ದಾರೆಂದು ನಾನು ಸಾಕ್ಷಿ ವಹಿಸುತ್ತೇನೆ. ಅವರು ಪೂರ್ವಿಕರ ಹಾಗೂ ನಂತರದವರ ನಾಯಕರು. ಅಲ್ಲಾಹು ಅವರ ಮೇಲೆ, ಅವರ ಸಹಾಬಾಗಳ ಮೇಲೆ, ವಿಶ್ವಾಸಿಗಳ ಮಾತೆಯರೂ, ಪರಿಶುದ್ಧೆಯರೂ ಆದ ಅವರ ಪತ್ನಿಯರ ಮೇಲೆ ಅಂತ್ಯದಿನದವರೆಗೆ ಶಾಶ್ವತವಾದ ರೀತಿಯಲ್ಲಿ ಸಲಾತ್ ಮತ್ತು ಸಲಾಮ್‌ಗಳನ್ನು ವರ್ಷಿಸುತ್ತಿರಲಿ. ಮುಂದುವರಿದು ಹೇಳುವುದೇನೆಂದರೆ...

ರಬೀಉಲ್ ಅವ್ವಲ್ ತಿಂಗಳಲ್ಲಿ ಜನರಲ್ಲಿ ಕೆಲವರು 'ಮೌಲಿದ್' ಎಂಬ ಹೆಸರಿನಲ್ಲಿ ನಿರ್ವಹಿಸುವ ಸಮಾವೇಶದ ಬಗ್ಗೆ ಅನುಗ್ರಹೀತ ಜನರ ಒಂದು ಗುಂಪು, ಇದಕ್ಕೆ (ಮೌಲಿದ್‌ಗೆ) ಶರೀಅತ್ತಿನಲ್ಲಿ ಏನಾದರೂ ಆಧಾರವಿದೆಯೇ? ಅಥವಾ ಅದು ಧರ್ಮದಲ್ಲಿ ನಿರ್ಮಿಸಲಾದ ಬಿದ್‌ಅತ್ ಆಗಿದೆಯೇ? ಎಂದು ನನ್ನೊಂದಿಗೆ ಪದೇ ಪದೇ ಪ್ರಶ್ನಿಸುತ್ತಿದ್ದಾರೆ.

ಅವರು ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಮತ್ತು ನಿರ್ದಿಷ್ಟ ವಿವರಣೆಯನ್ನು ಬಯಸಿದ್ದಾರೆ. ಆದ್ದರಿಂದ ನಾನು ಹೇಳುತ್ತೇನೆ: –ಯಶಸ್ಸನ್ನು ಕರುಣಿಸುವವನು ಅಲ್ಲಾಹನಾಗಿದ್ದಾನೆ–

ಈ ಮೌಲಿದ್‌ಗೆ ಅಲ್‌ಕಿತಾಬ್ (ಕುರ್‌ಆನ್)ನಲ್ಲಿ ಅಥವಾ ಅಸ್ಸುನ್ನಃ (ಪ್ರವಾದಿಚರ್ಯೆ)ದಲ್ಲಿ ಯಾವುದಾದರೂ ಆಧಾರವಿರುವುದಾಗಿ ನಾನು ಅರಿತಿಲ್ಲ. ಧಾರ್ಮಿಕ ವಿಷಯದಲ್ಲಿ ಅನುಸರಣಾಯೋಗ್ಯರಾಗಿರುವ ಮತ್ತು ಪೂರ್ವಿಕರ ಚರ್ಯೆಗಳನ್ನು ಬಲವಾಗಿ ಹಿಡಿದುಕೊಂಡಿರುವ ಸಮುದಾಯದ ವಿದ್ವಾಂಸರ ಪೈಕಿ ಯಾರೊಬ್ಬರಿಂದಲೂ ಇದನ್ನು ಉದ್ಧರಿಸಲಾಗಿಲ್ಲ. ಬದಲಾಗಿ ಈ ಮೌಲಿದ್ ಆಚರಣೆಯು ಒಂದು ಬಿದ್‌ಅತ್ ಆಗಿದೆ. ಸೋಮಾರಿಗಳು ಮತ್ತು ದೇಹೇಚ್ಛೆಯನ್ನು ಅನುಸರಿಸುವವರು ಇದನ್ನು ಹೊಸದಾಗಿ ನಿರ್ಮಿಸಿದರು. ಹೊಟ್ಟೆಬಾಕರು ಇದರ ಬಗ್ಗೆ ವಿಶೇಷ ಕಾಳಜಿ ವಹಿಸಿದರು.

ಇದಕ್ಕಿರುವ ಪುರಾವೆ: (ಇಸ್ಲಾಮೀ ಕರ್ಮಶಾಸ್ತ್ರದ) ಪಂಚನಿಯಮಗಳನ್ನು ಪ್ರಯೋಗಿಸಿ ನೋಡಿದರೆ, ಇದನ್ನು ಒಂದೋ ವಾಜಿಬ್ (ಕಡ್ಡಾಯ), ಅಥವಾ ಮನ್ದೂಬ್ (ಪ್ರೋತ್ಸಾಹನೀಯ), ಅಥವಾ ಮುಬಾಹ್ (ಸಮ್ಮತಾರ್ಹ), ಅಥವಾ ಮಕ್ರೂಹ್ (ಅಸಹ್ಯ), ಅಥವಾ ಮುಹರ್ರಮ್ (ನಿಷಿದ್ಧ) ಎನ್ನಬೇಕಾಗುತ್ತದೆ.

ವಿದ್ವಾಂಸರ ಒಮ್ಮತಾಭಿಪ್ರಾಯ ಪ್ರಕಾರ ಇದು ವಾಜಿಬ್ (ಕಡ್ಡಾಯ) ಅಲ್ಲ, ಮನ್ದೂಬ್ (ಪ್ರೋತ್ಸಾಹನೀಯ) ಕೂಡ ಅಲ್ಲ. ಯಾಕೆಂದರೆ ಶರೀಅತ್ ಮಾಡಲು ಆದೇಶಿಸಿರುವ ಮತ್ತು ವರ್ಜಿಸಿದರೆ ಶಿಕ್ಷೆಯಿಲ್ಲದಿರುವ ಒಂದು ಕರ್ಮವನ್ನು ಮನ್ದೂಬ್ ಎನ್ನಲಾಗುತ್ತದೆ. ಆದರೆ ಮೌಲಿದ್ ಆಚರಣೆ ಮಾಡಲು ಶರೀಅತ್ ಆದೇಶಿಸಿಲ್ಲ. ನಾನು ಅರಿತಿರುವ ಪ್ರಕಾರ ಸಹಾಬಿಗಳು, ತಾಬಿಊನ್‌ಗಳು ಮತ್ತು ಧರ್ಮವನ್ನು ನಿಖರವಾಗಿ ಪಾಲಿಸಿದ ವಿದ್ವಾಂಸರಲ್ಲಿ ಯಾರೂ ಇದನ್ನು ಆಚರಿಸಿಲ್ಲ. ಅಲ್ಲಾಹನ ಮುಂದೆ ಇದರ ಬಗ್ಗೆ ಪ್ರಶ್ನಿಸಲಾದರೆ ನಾನು ನೀಡುವ ಉತ್ತರ ಇದೇ ಆಗಿದೆ. ಇದು ಮುಬಾಹ್ (ಸಮ್ಮತಾರ್ಹ) ಆಗಲು ಸಾಧ್ಯವಿಲ್ಲ. ಯಾಕೆಂದರೆ ವಿದ್ವಾಂಸರ ಏಕಾಭಿಪ್ರಾಯ ಪ್ರಕಾರ ಧರ್ಮದಲ್ಲಿ ನಿರ್ಮಿಸಲಾಗುವ ನೂತನಾಚಾರಗಳು ಮುಬಾಹ್ ಆಗುವುದಿಲ್ಲ.

ಆದ್ದರಿಂದ ಇದು ಒಂದೋ ಮಕ್ರೂಹ್ (ಅಸಹ್ಯ) ಅಥವಾ ಹರಾಮ್ (ನಿಷಿದ್ಧ) ಆಗಿರಲು ಮಾತ್ರ ಸಾಧ್ಯ. ಈ ಸಂದರ್ಭದಲ್ಲಿ ಇದರ ಬಗ್ಗೆ ಎರಡು ವ್ಯತ್ಯಸ್ತ ಸ್ಥಿತಿಗಳಲ್ಲಿ ಎರಡು ವ್ಯತ್ಯಸ್ತ ಅಭಿಪ್ರಾಯಗಳನ್ನು ಹೇಳಬೇಕಾಗುತ್ತದೆ.

ಮೊದಲನೆಯದಾಗಿ: ಒಬ್ಬ ವ್ಯಕ್ತಿ ತನ್ನ ಸ್ವಂತ ಹಣದಿಂದ ತನ್ನ ಮನೆಯವರು, ಗೆಳೆಯರು ಮತ್ತು ಕುಟುಂಬದವರೊಂದಿಗೆ ಇದನ್ನು ಆಚರಿಸುವುದು. ಆದರೆ ಆ ಸಮಾವೇಶದಲ್ಲಿ ಅವನು ಅವರಿಗೆ ಔತಣ ನೀಡುವ ಹೊರತು ಬೇರೇನೂ ಮಾಡುವುದಿಲ್ಲ. ಇದನ್ನು ಆಚರಿಸುವಾಗ ಅವರು ಪಾಪವಾಗಿರುವ ಯಾವುದೇ ಕೃತ್ಯವನ್ನೂ ಮಾಡುವುದಿಲ್ಲ. ಇಂತಹ ಒಂದು ಆಚರಣೆಯನ್ನು ನಾವು ಅಸಹ್ಯಕರ ಮತ್ತು ಕೆಟ್ಟ ಬಿದ್‌ಅತ್ ಎಂದು ವಿವರಿಸುತ್ತೇವೆ. ಯಾಕೆಂದರೆ ಧರ್ಮವನ್ನು ನಿಖರವಾಗಿ ಅನುಸರಿಸಿದ ಪೂರ್ವಿಕರ ಪೈಕಿ, ಅಂದರೆ ಕಾಲಗಳ ಬೆಳಕುಗಳಾಗಿರುವ ಮತ್ತು ಸ್ಥಳಗಳ ಅಲಂಕಾರಗಳಾಗಿರುವ ಇಸ್ಲಾಮಿನ ಫುಕಹಾಗಳು ಮತ್ತು ಜಗತ್ತಿನ ಉಲಮಾಗಳ ಪೈಕಿ ಯಾರೂ ಇದನ್ನು ಆಚರಿಸಿಲ್ಲ.

ಎರಡನೆಯದಾಗಿ: ಈ ಆಚರಣೆಯೊಂದಿಗೆ ಅಪರಾಧವು (ಪಾಪಕೃತ್ಯ, ಅವಿಧೇಯತೆ, ನಿಷಿದ್ಧಕೃತ್ಯ ಇತ್ಯಾದಿ) ಸೇರಿಕೊಳ್ಳುವುದು ಮತ್ತು (ಇದರ ಆಚರಣೆಗೆ ಧನಸಂಗ್ರಹ ಮಾಡುವುದಕ್ಕಾಗಿ) ಪೂರ್ಣ ಶ್ರಮವನ್ನು ವ್ಯಯಿಸುವುದು. ಎಲ್ಲಿಯವರೆಗೆಂದರೆ ಒಬ್ಬನು ತನ್ನ ಮನಸ್ಸಿನ ಅಸಮ್ಮತಿಯೊಂದಿಗೆ, ಹೃದಯದ ಬೇನೆ ಮತ್ತು ನೋವಿನೊಂದಿಗೆ ಹಣ ನೀಡುವವರೆಗೆ. ಯಾಕೆಂದರೆ ಅವನು ಇದರಲ್ಲಿ ದಬ್ಬಾಳಿಕೆಯ ನೋವನ್ನು ಅನುಭವಿಸುತ್ತಾನೆ. ವಿದ್ವಾಂಸರು (ಅಲ್ಲಾಹು ಅವರನ್ನು ಅನುಗ್ರಹಿಸಲಿ) ಹೇಳಿದರು: 'ಸಭ್ಯತೆಯನ್ನು ಪ್ರದರ್ಶಿಸುತ್ತಾ ಹಣವನ್ನು ಪಡೆಯುವುದು ಖಡ್ಗವನ್ನು ತೋರಿಸಿ ಹಣವನ್ನು ಪಡೆದಂತೆಯೇ ಆಗಿದೆ.' ಮೌಲಿದ್ ಆಚರಣೆಯಲ್ಲಿ ಇದರೊಂದಿಗೆ ನಿಷಿದ್ಧ ಉಪಕರಣಗಳ ಮೂಲಕ ಹೊಟ್ಟೆಬಾಕರ ಗಾನಮೇಳಗಳು, ದಫ್ಫ್‌ಗಳು ಮತ್ತು ಯುವತಿಯರು, ಅಪ್ರಾಪ್ತ ಹುಡುಗರೊಂದಿಗೆ ಸೇರಿಕೊಂಡ ಪುರುಷರು, ಅನ್ಯ ಪುರುಷರೊಂದಿಗೆ ಬೆರೆತು ಅಥವಾ ಎತ್ತರವಾದ ಸ್ಥಳದಲ್ಲಿ ನಿಂತು ಓಲಾಡುತ್ತಾ ವಾಲುತ್ತಾ ಹಾಡುವ ಮತ್ತು ಶಿಖಂಡಿಗಳಂತೆ ಮತ್ತು ಅಸಹಜ ವರ್ತನೆಯೊಂದಿಗೆ ನರ್ತಿಸುವ ಮಹಿಳೆಯರು, ಅಂತ್ಯದಿನವನ್ನು ಮರೆಯುವ ರೀತಿಯಲ್ಲಿ ಮನರಂಜನೆಯಲ್ಲಿ ಮತ್ತು ಮರೆವಿನಲ್ಲಿ ಮಗ್ನರಾಗಿರುವವರು ಇತ್ಯಾದಿಗಳು ಸೇರಿಕೊಂಡರೆ ಇದರ ಸ್ಥಿತಿ ಹೇಗಿರಬಹುದು!

ಹಾಗೆಯೇ ಮಹಿಳೆಯರು ಮಾತ್ರ ಒಂದೆಡೆ ಸೇರಿಕೊಂಡು ತಮ್ಮ ಧ್ವನಿಗಳನ್ನು ಎತ್ತಿ ಹಾಡುಗಳನ್ನು ಹಾಡುತ್ತಾ, ಶರೀಅತ್ ನಿರ್ದೇಶಿಸದ ರೀತಿಯಲ್ಲಿ ಮತ್ತು ಅಪರಿಚಿತವಾದ ವಿಧದಲ್ಲಿ ಕುರ್‌ಆನ್ ಪಾರಾಯಣ ಮತ್ತು ದಿಕ್ರ್ ಪಾರಾಯಣ ಮಾಡುತ್ತಾ, ಹೀಗೆ 'ಖಂಡಿತವಾಗಿಯೂ ಅಲ್ಲಾಹು ಹೊಂಚುಹಾಕಿ ಗಮನಿಸುತ್ತಿದ್ದಾನೆ' [ಕುರ್‌ಆನ್ 89:14] ಎಂಬ ಅಲ್ಲಾಹನ ವಚನವನ್ನು ಕಡೆಗಣಿಸುತ್ತಿರುವ ಮಹಿಳೆಯರು.

ಇಂತಹ ಆಚರಣೆ ನಿಷಿದ್ಧವಾಗಿದೆ ಎಂಬ ವಿಷಯದಲ್ಲಿ ಎರಡಭಿಪ್ರಾಯವಿಲ್ಲ. ಪುರುಷತ್ವವಿರುವ ಯಾರು ಕೂಡ ಇದನ್ನು ಉತ್ತಮವೆಂದು ಹೇಳಲಾರರು. ಹೃದಯವು ಸತ್ತುಹೋಗಿರುವ ಜನರ ಮತ್ತು ಪಾಪ ಹಾಗೂ ದೋಷಗಳಿಂದ ಮುಕ್ತವಾಗಿರದವರ ಮನಸ್ಸಿನಲ್ಲಿ ಮಾತ್ರ ಇದು ಸಮ್ಮತಾರ್ಹವಾಗಿದೆ. ಅವರು ಇದನ್ನು ಇಬಾದತ್ ಆಗಿ ಪರಿಗಣಿಸುತ್ತಾರೆಯೇ ಹೊರತು ನಿಷಿದ್ಧಕೃತ್ಯವೆಂದು ಪರಿಗಣಿಸುವುದೇ ಇಲ್ಲವೆಂದು ನಾನು ಹೆಚ್ಚುವರಿಯಾಗಿ ಹೇಳಲೇಬೇಕಾಗಿದೆ. ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್. ಇಸ್ಲಾಮ್ ಅಪರಿಚಿತವಾಗಿ ಆರಂಭವಾಯಿತು. ಅದು ಹೇಗೆ ಆರಂಭವಾಯಿತೋ ಅದೇ ಸ್ಥಿತಿಗೆ ಅದು ಮರಳಲಿದೆ.

ಅಶ್ಶೈಖ್ ಅಲ್‌ಕುಶೈರೀ ಹೇಳಿದರು: "ನಮ್ಮ ಈ ಕಷ್ಟದ ದಿನಗಳಲ್ಲಿ ದುರಾಚಾರವು ಸದಾಚಾರವಾಗಿ ಮತ್ತು ಸದಾಚಾರವು ದುರಾಚಾರವಾಗಿ ಮಾರ್ಪಟ್ಟಿದೆ. ವಿದ್ವಾಂಸರು ಖಿನ್ನತೆಯಲ್ಲಿ ಮುಳುಗಿದ್ದಾರೆ ಮತ್ತು ಅಜ್ಞಾನಿಗಳು ಶ್ರೇಷ್ಠ ಪದವಿಗಳಲ್ಲಿದ್ದಾರೆ. ಅವರು ಸತ್ಯದಿಂದ ತಪ್ಪಿಹೋದರು. ಆದ್ದರಿಂದ ಅವರು ಸಾಗುತ್ತಿರುವ ದಾರಿಗೆ ಪೂರ್ವಿಕರೊಂದಿಗಿರುವ ಸಂಬಂಧವಾದರೂ ಏನು? ದುಃಖವು ವಿಪರೀತವಾದಾಗ ಭಯಭಕ್ತಿಯುಳ್ಳ ಮತ್ತು ಧರ್ಮವನ್ನು ಪಾಲಿಸುವ ಸಜ್ಜನರೊಂದಿಗೆ ನಾನು ಹೇಳಿದೆ. 'ನೀವು ನಿಮ್ಮ ಸ್ಥಿತಿಯನ್ನು ಕಂಡು ದುಃಖಿತರಾಗದಿರಿ. ಅಪರಿಚಿತ ಕಾಲದಲ್ಲಿ ನಿಮ್ಮ ಸರದಿ ಬಂದೇ ಬಿಟ್ಟಿದೆ'."

ಇಮಾಮ್ ಅಬೂ ಅಮ್ರ್ ಇಬ್ನುಲ್ ಅಲಾಅ್ ಹೇಳಿದರು: "ಅಚ್ಚರಿಯಿಂದಾಗಿ ಅಚ್ಚರಿಗೊಳ್ಳುವವರೆಗೆ ಜನರು ಒಳಿತಿನಲ್ಲಿಯೇ ಇರುವರು. ಅಂದರೆ ಮೌಲಿದ್ ಆಗಿ ಆಚರಿಸುವ ಯಾವ ರಬೀಉಲ್ ಅವ್ವಲ್ ತಿಂಗಳಲ್ಲಿ ಪ್ರವಾದಿ(ﷺ)ರವರು ಜನ್ಮ ತಾಳಿದರೋ ಅದೇ ತಿಂಗಳಲ್ಲೇ ಮರಣಹೊಂದಿದ್ದರು. ಆದ್ದರಿಂದ ಈ ತಿಂಗಳಲ್ಲಿ ದುಃಖಿಸುವುದಕ್ಕಿಂತಲೂ ಹೆಚ್ಚಿನ ಆದ್ಯತೆಯನ್ನು ಸಂತೋಷ ಪ್ರಕಟಿಸುವುದಕ್ಕೆ ನೀಡಬಾರದು."

ನಾವು ಹೇಳಬೇಕಾದುದನ್ನು ಹೇಳಿದ್ದೇವೆ. ಅಲ್ಲಾಹು ಇದನ್ನು ಉತ್ತಮ ಸತ್ಕರ್ಮವಾಗಿ ಸ್ವೀಕರಿಸುವನು ಎಂದು ಆಶಿಸುತ್ತೇವೆ. [ಅಲ್‌ಹಾವೀ ಲಿಲ್ ಫತಾವಾ ಪುಟ 184]

# ಅಶ್ಶೈಖ್ ಅಲ್‌ಉಸೈಮೀನ್(رحمه الله)

ನಮ್ಮ ಅಭಿಪ್ರಾಯ ಪ್ರಕಾರ ಪ್ರವಾದಿ(ﷺ)ರವರನ್ನು ಪ್ರೀತಿಸುವವರೆಗೆ, ಅವರನ್ನು ಆದರಿಸಬೇಕಾದ ರೀತಿಯಲ್ಲಿ ಆದರಿಸುವವರೆಗೆ ಮತ್ತು ಅವರಿಗೆ ಅರ್ಹವಾಗಿರುವ ಹಕ್ಕನ್ನು ಅವರಿಗೆ ನೀಡುವವರೆಗೆ ಓರ್ವ ವ್ಯಕ್ತಿಯ ಈಮಾನ್ ಪೂರ್ಣವಾಗದು. ಪ್ರವಾದಿ(ﷺ)ರವರ ನಿಯುಕ್ತಿ –ನಾನು ಅವರ ಜನನ ಎಂದು ಹೇಳುವುದಿಲ್ಲ, ಅವರ ನಿಯುಕ್ತಿ ಎನ್ನುತ್ತೇನೆ, ಯಾಕೆಂದರೆ ಅವರನ್ನು ಸಂದೇಶವಾಹಕರಾಗಿ ಕಳುಹಿಸಲಾಗುವವರೆಗೆ ಅವರು ಸಂದೇಶವಾಹಕರಾಗಿರಲಿಲ್ಲ. ವಿದ್ವಾಂಸರು ಹೇಳಿದರು: "ಇಕ್ರಅ್‌ನೊಂದಿಗೆ ಅವರು ಪ್ರವಾದಿಯಾದರು ಮತ್ತು ಅಲ್‌ಮುದ್ದಸ್ಸಿರ್‌ನೊಂದಿಗೆ ಅವರು ಸಂದೇಶವಾಹಕರಾದರು."

ಆದ್ದರಿಂದ ಪ್ರವಾದಿ(ﷺ)ರವರ ನಿಯುಕ್ತಿ ಸಂಪೂರ್ಣ ಮಾನವಕುಲಕ್ಕೆ ಒಂದು ವರದಾನವಾಗಿದೆ ಎಂಬುದರಲ್ಲಿ ಯಾವುದೇ ಅನುಮಾನವೂ ಇಲ್ಲ. ಅಲ್ಲಾಹು ಹೇಳಿದ್ದಾನೆ:

"(ಓ ಪ್ರವಾದಿಯವರೇ!) ಹೇಳಿರಿ: ಓ ಮನುಷ್ಯರೇ! ನಾನು ನಿಮ್ಮೆಲ್ಲರ ಕಡೆಗೆ ಅಲ್ಲಾಹನ –ಅಂದರೆ ಆಕಾಶಗಳ ಮತ್ತು ಭೂಮಿಯ ಆಧಿಪತ್ಯ ಯಾರಿಗಾಗಿದೆಯೋ ಅವನ ಸಂದೇಶವಾಹಕನಾಗಿ ಕಳುಹಿಸಲ್ಪಟ್ಟಿದ್ದೇನೆ. ಅವನ ಹೊರತು ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ. ಅವನು ಜೀವವನ್ನು ನೀಡುತ್ತಾನೆ ಮತ್ತು ಮರಣವನ್ನು ನೀಡುತ್ತಾನೆ. ಆದ್ದರಿಂದ ಅಲ್ಲಾಹನಲ್ಲಿ ಮತ್ತು ಅಲ್ಲಾಹು ಹಾಗೂ ಅವನ ವಚನಗಳಲ್ಲಿ ವಿಶ್ವಾಸವಿಡುವ ನಿರಕ್ಷರಿ ಪ್ರವಾದಿಯಾದ ಸಂದೇಶವಾಹಕರಲ್ಲಿ ವಿಶ್ವಾಸವಿಡಿರಿ ಮತ್ತು ಅವರನ್ನು ಅನುಸರಿಸಿರಿ. ನೀವು ಸನ್ಮಾರ್ಗ ಪಡೆದವರಾಗಲೂಬಹುದು." [ಕುರ್‌ಆನ್ 7/158]

ಹೀಗಿರುವಾಗ, ಪ್ರವಾದಿ(ﷺ)ರವರನ್ನು ಆದರಿಸುವುದರಲ್ಲಿ, ಅವರನ್ನು ಗೌರವಿಸುವುದರಲ್ಲಿ, ಅವರ ವಿಷಯದಲ್ಲಿ ಶಿಷ್ಟಾಚಾರ ಪಾಲಿಸುವುದರಲ್ಲಿ ಮತ್ತು ಅವರನ್ನು ಅನುಸರಣಾಯೋಗ್ಯ ನಾಯಕನನ್ನಾಗಿ ಮಾಡಿಕೊಳ್ಳುವುದರಲ್ಲಿ ಅವರು ನಮಗೆ ಶರೀಅತ್ ಆಗಿ ಮಾಡಿರುವ ಇಬಾದತ್‌ಗಳಲ್ಲಿ ನಾವು ಹದ್ದು ಮೀರಬಾರದು. ಯಾಕೆಂದರೆ ಪ್ರವಾದಿ(ﷺ)ರವರು ತಮ್ಮ ಸಮುದಾಯಕ್ಕೆ ಒಂದೇ ಒಂದು ಒಳಿತನ್ನೂ ತೋರಿಸಿಕೊಡದೆ ಬಾಕಿಯುಳಿಸಿ ಮರಣಹೊಂದಿಲ್ಲ. ಹಾಗೆಯೇ ಒಂದೇ ಒಂದು ಕೆಡುಕನ್ನೂ ವಿವರಿಸಿಕೊಡದೆ ಮತ್ತು ಎಚ್ಚರಿಕೆ ನೀಡದೆ ಬಾಕಿಯುಳಿಸಿಲ್ಲ. ಆದ್ದರಿಂದ ನಾವು ಅವರನ್ನು ಅನುಸರಣಾಯೋಗ್ಯ ನಾಯಕರೆಂದು ವಿಶ್ವಾಸವಿಟ್ಟಿರುವಾಗ ಅವರ ಜನ್ಮದಿನವಾಗಲಿ, ನಿಯೋಗದಿನವಾಗಲಿ ಆಚರಿಸುವ ಮೂಲಕ ನಾವು ಅವರ